ದಿನಾಂಕ:02-07-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಪಿ ವಕೀಲರಿಂದಃ

ನನ್ನ ಮದುವೆಯಾಗಿ ಸುಮಾರು 25 ರಿಂದ 30 ವರ್ಷಗಳಾಗಿವೆ. 2ನೇ ಪ್ರತಿವಾದಿಯ ಗಂಡ ನನ್ನ ತಮ್ಮನಾಗಬೇಕು. 2ನೇ ಪ್ರತಿವಾದಿ ಗಂಡ ಸುಮಾರು 5 ವರ್್ಪಗಳ ಹಿಂದೆ ತೀರಿಹೋಗಿರುತ್ತಾರೆ. ಅವರ ಜೀವಂತ ಅವಧಿಯಲ್ಲಿ 2ನೇ ಪ್ರತಿವಾದಿ ರಿಂದ 5ನೇ ಪ್ರತಿವಾದಿ ಒಂದೇ ಕುಟುಂಬದಲ್ಲಿ ವಾಸವಾಗಿದ್ದರು. 6ನೇ ಪ್ರತಿವಾದಿಯೂ ಸಹ ತಮ್ಮ ಕುಟುಂಬದ ಜೊತೆ ಬೇರೆಯಾಗಿ ವಾಸವಾಗಿದ್ದರು. 8ನೇ ಪ್ರತಿವಾದಿಯೂ ಸಹ ತಮ್ಮ ಕುಟುಂಬದ ಜೊತೆ ಬೇರೆಯಾಗಿ ವಾಸವಾಗಿದ್ದರು. 2 ರಿಂದ 5ನೇ ಪ್ರತಿವಾದಿಗಳು ಪ್ರತ್ಯೇಕವಾಗಿ ವ್ಯವಸಾಯ ಮಾಡಿಕೊಂಡು ಜೀವನ ಮಾಡುತ್ತಿದ್ದರು. 6ನೇ ಪ್ರತಿವಾದಿಯೂ ಸಹ ಪ್ರತ್ಯೇಕವಾಗಿ ವ್ಯವಸಾಯ ಮಾಡಿಕೊಂಡು ಜೀವನ ಮಾಡುತ್ತಿದ್ದರು. 1 ಮತ್ತು 8ನೇ ಪ್ರತಿವಾದಿಗಳೂ ಸಹ ಪ್ರತ್ಯೇಕವಾಗಿ ವ್ಯವಸಾಯ ಮಾಡಿಕೊಂಡು ಜೀವನ ಮಾಡುತ್ತಿದ್ದರು. 7ನೇ ಪ್ರತಿವಾದಿಯ ಮದುವೆ 20 ವರ್ಷಗಳ ಹಿಂದೆ ಆಗಿದೆ. ಅವರೊಂದಿಗೆ ನಾನು ಅನ್ಯೋನ್ಯವಾಗಿರುವುದಿಲ್ಲ. ದಾವಾ ಆಸ್ತಿಯ ಐಟಂ ನಂ:1 ನ್ನು ನಾನು ನೋಡಿರುತ್ತೇನೆ. ಸದರಿ ಆಸ್ತಿಯು 6 ಎಕರೆ ಮೇಲೆ ಇದೆ ಎಂದು ನುಡಿಯುತ್ತಾರೆ. ದಾವಾ ಐಟಂ:ನಂ:1 ಕ್ಕೆ ಮೊದಲು ಹೋಗುತ್ತಿದ್ದೇವು. ಸುಮಾರು 20 ವರ್ಷಗಳ ಹಿಂದೆ ಹೋಗಿದ್ದೆ. ಸದರಿ ಆಸ್ತಿಯ ಅಕ್ಕಪಕ್ಕದಲ್ಲಿ ಯಾರು ಇದ್ದಾರೆ ಎಂದು ಹೇಳಲು ಆಗುವುದಿಲ್ಲ. ಸದರಿ ಆಸ್ತಿಯು 1ನೇ ಪ್ರತಿವಾದಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯ ವ್ಯವಸಾಯ ಮತ್ತು ಇನ್ನಿತರೆ ವ್ಯವಹಾರಗಳನ್ನು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ದಿನಸಿ ವ್ಯವಹಾರದ ಆದಾಯದಿಂದ ಬಂದ ಹಣದಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯು ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿದ್ದೇವೆ. ಆದರಿ ಯಾವ ದಾಖಲೆ ಕೊಟ್ಟಿದ್ದೇವೆ ಎಂದು ಹೇಳಲು ಆಗುವುದಿಲ್ಲ.

ಸದರಿ ಆಸ್ತಿಯು ಪಿತ್ರಾರ್ಜಿತ ಅಲ್ಲ, 1ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿಯು 6 ಎಕರೆ ಮೇಲೆ ಇದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ಸತ್ಯ ಎಂದಿದ್ದಾರೆ. ಸ.ನಂ: 46/1 ಆಸ್ತಿಯು 5 ಎಕರೆ 8 ಗುಂಟೆ ಎಂದು ಹೇಳಿ ಸುಳ್ಳು ಬರೆಸಿದ್ದೀರಿ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು 2012ನೇ ಸಾಲಿನಲ್ಲಿ 5 ವರೇ ಗುಂಟೆ ಮಾತ್ರ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಸದರಿ ಸ್ವತ್ತು ಅವರು ಖರೀದಿ ಮಾಡಿದ್ದರಿಂದ , ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಅದು ನಮ್ಮ ತಾತನ ಆಸ್ತಿ ನಮಗೆ ಗೊತ್ತು ಎಂದಿದ್ದಾರೆ.

ದಾವಾ ಐಟಂ ನಂ:2 , ಸ.ನಂ: 4/2 ರಲ್ಲಿ 5 ಗುಂಟೆ ಇದೆ ಎಂದು ವಾದಪತ್ರದಲ್ಲಿ ಹೇಳಿದ್ದು, ಅದರ ಬಗ್ಗೆ ಯಾವ ದಾಖಲಾತಿ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿಯು ದಾಖಲೆಯನ್ನು ಕೊಟ್ಟಿದ್ದೇವೆ ಎಂದಿದ್ದಾರೆ. ಸದರಿ ಆಸ್ತಿಯ ಎಷ್ಟು ಎಕರೆ , ಎಷ್ಟು ಗುಂಟೆ ಇದೆ ಎಂದು ನನಗೆ ಗೊತ್ತಿಲ್ಲ. ಈಗ ಸದರಿ ಜಮೀನು ನೋಡಿಲ್ಲ ಆದರೆ 20 ವರ್ಷಗಳ ಹಿಂದೆ ನೋಡಿರುತ್ತೇನೆ. ಸದರಿ ಆಸ್ತಿಯ ಚೆಕ್ಕುಬಂದಿ ಗೊತ್ತಿಲ್ಲ. ದಾವಾ ಐಟಂ ನಂ:2 ರ ಆಸ್ತಿಯ 1ನೇ ಪ್ರತಿವಾದಿಗೆ ಸೇರದಿದ್ದರೂ ಸುಳ್ಳಾಗಿ ಸೇರಿಸಿದ್ದೀರಿ ಎಂದರೆ ಸಾಕ್ಷಿಯು ಅದು ಸುಳ್ಳಲ್ಲ ಅದು ನಮ್ಮದೇ ಜಮೀನು ಎಂದು ನುಡಿಯುತ್ತಾರೆ. ಸದರಿ ದಾವಾ ಆಸ್ತಿಯು ಅಸ್ತಿತ್ವದಲ್ಲಿ ಇಲ್ಲದೇ ಇರುವುದರಿಂದ ನ್ಯಾಯಾಲಯಕ್ಕೆ ದಾಖಲೆಗಳನ್ನು ಕೊಟ್ಟಿಲ್ಲ ಎಂದರೆ ಸಾಕ್ಷಿಯು ನ್ಯಾಯಾಲಯಕ್ಕೆ ದಾಖಲೆಗಳನ್ನು ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. 8ನೇ ಪ್ರತಿವಾದಿಯ ಅವರ ತಂದೆ ಮನೆ ಹುಣಸೂರು ತಾಲ್ಲೂಕಿನ, ಮಾರಗೌಡನಹಳ್ಳಿ ಎಂದರೆ ಸರಿ. 8ನೇ ಪ್ರತಿವಾದಿಯ ತಂದೆ ಮನೆಯವರಿಗೂ ಸಹ ಜಮೀನು ಮತ್ತು ಮನೆ ಇತ್ತು ಎಂದರೆ ಸರಿ. ಸದರಿಯವರೂ ಹಣಕಾಸಿನಲ್ಲಿ ಸುಸ್ಥಿತಿಯಲ್ಲಿ ಇದ್ದರು ಎಂದರೆ ಸಾಕ್ಷಿಯು ಆಗ ಇದ್ದರೂ ಈಗ ಇಲ್ಲ ಎಂದಿದ್ದಾರೆ.

ದಾವಾ ಐಟಂ ನಂ:3 ರ ಜಮೀನು 1ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ದಾವಾ ಐಟಂ ನಂ:3 ಜಮೀನು ಸಹ 3 ಎಕರೆ ಇರುತ್ತದೆ. ಸದರಿ ಜಮೀನಿಗೂ ಸಹ ನಾನು ಹೋಗಿರುವುದಿಲ್ಲ. ಸದರಿ ಜಮೀನಿನ ಅಕ್ಕಪಕ್ಕದಲ್ಲಿ ಯಾರು ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ದಾಖಲಾತಿಯನ್ನು ನಾನು ನೋಡಿರುವುದಿಲ್ಲ. ಸದರಿ ದಾವಾ ಆಸ್ತಿಯ ದಾಖಲಾತಿಗಳನ್ನು ನೋಡಿರದೆ ಇರುವುದರಿಂದ ನಿಮಗೆ ಯಾರ ಹೆಸರಿನಲ್ಲಿ ಆಸ್ತಿ ಇದೆ ಎಂದು ಗೊತ್ತಿಲ್ಲ ಎಂದರೆ ನಮ್ಮ ತಂದೆಯ ಹೆಸರಿನಲ್ಲಿ ಇದೆ. ತಂದೆಯ ಹೆಸರಿನಲ್ಲಿ ದಾಖಲಾತಿ ಕೊಟ್ಟಿರುತ್ತೇವೆ. ದಾವಾ ಸ್ವತ್ತು 1ನೇ ಪ್ರತಿವಾದಿಗೆ ತಾತನಿಂದ ಬಂದಿರುತ್ತದೆ. ಸದರಿ ದಾವಾ ಸ್ವತ್ತು 22 ಗುಂಟೆ ಮಾತ್ರ ಇದೆ ಎಂಬ ಪ್ರಶ್ನೆಗೆ 2 ಎಕರೆ ಇದೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು 2011 ನೇ ಸಾಲಿನಲ್ಲಿ 8ನೇ ಪ್ರತಿವಾದಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದ ತಂದೆಯಿಂದ ತಾಯಿಗೆ ಬಂದಿರುವ ಆಸ್ತಿ ಎಂದು ನುಡಿಯುತ್ತಾರೆ. ತಂದೆಯಿಂದ

ತಾಯಿಗೆ ಬಂದಿರುವ ಬಗ್ಗೆ ದಾಖಲಾತಿ ಇರುವುದಿಲ್ಲ ಎಂದರೆ ಸಾಕ್ಷಿಯು ದಾಖಲಾತಿ ಕೊಟ್ಟಿರುತ್ತೇವೆ ಎಂದಿದ್ದಾರೆ. ತಂದೆಯಿಂದ ತಾಯಿಗೆ ಬಂದಿದೆ ಎಂದು ಸುಳ್ಳು ಹೇಳುತ್ತೀರಿ ಎಂದರೆ ಸರಿಯಲ್ಲ. ತಂದೆಯಿಂದಲೇ ತಾಯಿಗೆ ಬಂದಿದೆ ಎಂದು ನುಡಿಯುತ್ತಾರೆ. ಸದರಿ ದಾವಾ ಸ್ವತ್ತು ಪಿತ್ರಾರ್ಜಿತ ಸ್ವತ್ತಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ ನಂ:4 ಎಷ್ಟು ಎಕರೆ ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನಿಗೆ ನಾನು ಹೋಗಿಲ್ಲ. ಸದರಿ ಜಮೀನಿನ ಹತ್ತಿರ ಯಾರು ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಯು ಯಾರ ಹೆಸರಿನಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತು ಸಹ 8ನೇ ಪ್ರತಿವಾದಿಯ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಯಾವ ಸ್ವತ್ತನ್ನು ಖರೀದಿ ಮಾಡಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂ: 3 ಮತ್ತು 4, 8ನೇ ಪ್ರತಿವಾದಿ ಖರೀದಿಸಿದ ಸ್ವತ್ತು ಪಿತ್ರಾರ್ಜಿತ ಸ್ವತ್ತು ಅಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ: 3 ಮತ್ತು 4ನೇ ಎಂಟನೇ ಪ್ರತಿವಾದಿ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ.

ದಾವಾ ಐಟಂ ನಂ: 5 ರಲ್ಲಿ ನಾಲ್ಕು ವರೆ ಎಕರೆ ಜಮೀನು ಇರುತ್ತದೆ. ಅದು ನಮ್ಮ ತಂದೆಯ ಹೆಸರಿನಲ್ಲಿ ಇರುತ್ತದೆ. ಸದರಿ ಸ್ವತ್ತು ನಮ್ಮ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ. ಸದರಿ ಸ್ವತ್ತನ್ನು ನಾನು, 6 ಮತ್ತು 7ನೇ ಪ್ರತಿವಾದಿಗಳು ನಾವುಗಳು ಬಾಯಿಮಾತಿನ ಮುಖಾಂತರ ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ದಾವಾ ಐಟಂ ನಂ:6 ಒಟ್ಟು ಎಷ್ಟು ಎಕರೆ ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನಿಗೆ ನಾನು ಹೋಗಿಲ್ಲ. ಸದರಿ ಜಮೀನಿನ ಅಕ್ಕಪಕ್ಕದಲ್ಲಿ ಯಾರು ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ದಾಖಲಾತಿಯನ್ನು ನಾನು ನೋಡಿರುವುದಿಲ್ಲ. ಸದರಿ ಆಸಿತಯು ಸಹ ನಮ್ಮ ತಂದೆಯವರ ಹೆಸರಿನಲ್ಲಿ ಇದೆ. ಸದರಿ ಆಸ್ತಿಯು ನಮ್ಮ ತಾತನ ಮುಖಾಂತರ ಬಂದಿರುತ್ತದೆ. ಅದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆ ನೋಡಿರುವುದಿಲ್ಲ. ಸದರಿ ಸ್ವತ್ತನ್ನು ನಮ್ಮ ತಂದೆಯವರು 2004-05 ರಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಐಟಂ ನಂ:7 ಒಟ್ಟು ಎಷ್ಟು ಎಕರೆ ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನಿಗೆ ನಾನು ಹೋಗಿಲ್ಲ. ಸದರಿ ಜಮೀನಿನ ಅಕ್ಕಪಕ್ಕದಲ್ಲಿ ಯಾರು ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ದಾಖಲಾತಿಯನ್ನು ನಾನು ನೋಡಿರುವುದಿಲ್ಲ. ಸದರಿ ಸ್ವತ್ತು ನಮ್ಮ ತಂದೆಯವರು ಕ್ರಯಪತ್ರದ ಮುಖಾಂತರ ಪಡೆದರು. ನಮ್ಮ

ತಂದೆಯವರು ವ್ಯಾಪಾರ ಮಾಡುತ್ತಿದ್ದುದರಿಂದ 2013 ರಲ್ಲಿ ಖರೀದಿ ಮಾಡಿದ್ದರು ಎಂದರೆ ಸರಿ.

ದಾವಾ ಐಟಂ ನಂ:8 ನಮ್ಮ ತಂದೆಯ ಹೆಸರಿನಲ್ಲಿ ಇರುತ್ತದೆ. ಸದರಿ ಸ್ವತ್ತು ನಮ್ಮ ತಂದೆಯವರಿಗೆ ತಾತನಿಂದ ಬಂದಿರುತ್ತದೆ. ಸದರಿ ಸ್ವತ್ತು ನಮ್ಮ ತಾತನಿಂದ ನನ್ನ ತಂದೆಗೆ ಬಂತು ಎನ್ನುವುದಕ್ಕೆ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಕೊಟ್ಟಿದ್ದೇವೆ. ಯಾವ ದಾಖಲಾತಿ ಎಂದರೆ ಹೇಳಲು ಆಗುವುದಿಲ್ಲ. ಮನೆ ಮತ್ತು ಖಾಲಿ ನಿವೇಶನವನ್ನು ನಮ್ಮ ತಂದೆಯವರು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ದಾವಾ ಸ್ವತ್ತು 1ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಎಂದರೆ ಸಾಕ್ಷಿಯು ಸದರಿ ಸ್ವತ್ತು ನಮ್ಮ ತಂದೆಯದ್ದೆ, ಆದರೆ ನಮಗೂ ಅದರಲ್ಲಿ ಹಕ್ಕು ಇದೆ ಎಂದು ಹೇಳುತ್ತಾರೆ.

ದಾವಾ ಐಟಂ ನಂ:9 ಮತ್ತು 10 ರ ಜಂಜರ್ ನಂ: 173/131 ಮತ್ತು 243/187 ರ ಸ್ವತ್ತುಗಳು ನಮ್ಮ ತಂದೆಯ ಹೆಸರಿನಲ್ಲಿ ಇರುತ್ತವೆ. ಸದರಿ ಸ್ವತ್ತು ನಮ್ಮ ತಂದೆಯ ಸ್ವಯಾರ್ಜಿತ ಸ್ವತ್ತು ಆದರೆ ನಮಗೂ ಸೇರಬೇಕು ಎಂದಿದ್ದಾರೆ. ದಾವಾ ಐಟಂ ನಂ:5 ಹುಣಸೂರು ತಾಲ್ಲೂಕು, ಅಂಕಳ್ಳಿ ಗ್ರಾಮದ ಸ.ನಂ: 12/12 ರಲ್ಲಿ 3 ಎಕರೆ 22 ಗುಂಟೆ ಜಮೀನಿನಲ್ಲಿ 1, 2 , 6 ಮತ್ತು 8ನೇ ಪ್ರತಿವಾದಿಗಳು ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ಕೋರಿಕೆ ಮೇರೆಗೆ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.